KAHS510011292020

Presented on : 07-11-2020
Registered on : 07-11-2020
IA No.II filed on : 07-11-2020
IA No.II Decided on : 25-05-2022
Duration : 01 year, 06 months, 18 days

## ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೇಲೂರು.

ದಿನಾಂಕಃ 25 ನೇ ಮೇ ಮಾರ್ಚ್ ಮಾಹೆ, 2022 ನೇ ಇಸವಿ

: ಉಪಸ್ಥಿತರು :
ಶ್ರೀ ಪ್ರಸನ್ನ ಕುಮಾರ್ ಸಿ., ಬಿ.ಎ.ಎಲ್. ಎಲ್‌ಎಲ್.ಬಿ.
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಬೇಲೂರು.

**ಅಸಲು ದಾವಾ ಸಂಖ್ಯೆಃ 310/2020**

1. ಶ್ರೀಮತಿ ಸಿ.ಆರ್. ವಿಶಾಲಾಕ್ಷಿ ಕೋಂ ಶಂಕರಾಚಾರ್,
ಸುಮಾರು 45 ವರ್ಷ ವಯಸ್ಸು,
ಎಂ. ಹುಣಸೆಕೆರೆ ಗ್ರಾಮ,
ಕಸಬಾ ಹೋಬಳಿ,
ಬೇಲೂರು ತಾಲ್ಲೂಕು,
ಹಾಸನ ಜಿಲ್ಲೆ.

2. ಶ್ರೀ ಹೆಚ್.ಎಸ್. ರಾಕೇಶ್ ಬಿನ್ ಶಂಕರಾಚಾರ್,
ಸುಮಾರು 21 ವರ್ಷ ವಯಸ್ಸು,
ಎಂ. ಹುಣಸೆಕೆರೆ ಗ್ರಾಮ,
ಕಸಬಾ ಹೋಬಳಿ,
ಬೇಲೂರು ತಾಲ್ಲೂಕು,
ಹಾಸನ ಜಿಲ್ಲೆ.

3. ಶ್ರೀ ಹೆಚ್.ಎಸ್. ಶುಭ ಬಿನ್ ಶಂಕರಾಚಾರ್,
ಸುಮಾರು 20 ವರ್ಷ ವಯಸ್ಸು,
ಎಂ. ಹುಣಸೆಕೆರೆ ಗ್ರಾಮ,

ಕಸಬಾ ಹೋಬಳಿ,
ಬೇಲೂರು ತಾಲ್ಲೂಕು,
ಹಾಸನ ಜಿಲ್ಲೆ. ....ವಾದಿಗಳು

(ವಾದಿಯರ ಪರವಾಗಿ ಶ್ರೀ ಬಿ.ಎಸ್.ಜಿ. ಸ್ವಾಮಿ, ವಕೀಲರು ಪ್ರತಿನಿಧಿಸಿರುತ್ತಾರೆ.)

ವಿರುದ್ಧ

1. ಶ್ರೀಮತಿ ಕಮಲ ಉಃ ಕಮಲಮ್ಮ ಕೋಂ ರಾಮಚಾರಿ,
ಸುಮಾರು 35 ವರ್ಷ ವಯಸ್ಸು,
ನೇರ್ಲಿಗೆ ಗ್ರಾಮ ಮತ್ತು ಅಂಚೆ,
ಜಾವಗಲ್ ಹೋಬಳಿ,
ಅರಸೀಕೆರೆ ತಾಲ್ಲೂಕು,
ಹಾಸನ ಜಿಲ್ಲೆ.

2. ಶ್ರೀಮತಿ ಮೀನಾಕ್ಷಿ ಕೋಂ ಕುಮಾರಚಾರಿ,
ಸುಮಾರು 45 ವರ್ಷ ವಯಸ್ಸು,
ಹಳೇಬೀಡು ಗ್ರಾಮ ಮತ್ತು ಟೌನ್,
ಹಳೇಬೀಡು ಹೋಬಳಿ,
ಬೇಲೂರು ತಾಲ್ಲೂಕು,
ಹಾಸನ ಜಿಲ್ಲೆ.

3. ಶ್ರೀಮತಿ ಕಾಳಮ್ಮ ಕೋಂ ರುದ್ರೇಗೌಡ,
ಸುಮಾರು 40 ವರ್ಷ ವಯಸ್ಸು,
ಎಂ. ಹುಣಸೆಕೆರೆ ಗ್ರಾಮ,
ಕಸಬಾ ಹೋಬಳಿ,
ಬೇಲೂರು ತಾಲ್ಲೂಕು,
ಹಾಸನ ಜಿಲ್ಲೆ.

4. ಶ್ರೀ ಶಂಕರೇಗೌಡ ಬಿನ್ ರುದ್ರೇಗೌಡ,
ಸುಮಾರು 30 ವರ್ಷ ವಯಸ್ಸು,
ಎಂ. ಹುಣಸೆಕೆರೆ ಗ್ರಾಮ,
ಕಸಬಾ ಹೋಬಳಿ,
ಬೇಲೂರು ತಾಲ್ಲೂಕು,
ಹಾಸನ ಜಿಲ್ಲೆ.

5. ಶ್ರೀ ರವಿಕುಮಾರ್ ಬಿನ್ ರುದ್ರೇಗೌಡ,
ಸುಮಾರು 28 ವರ್ಷ ವಯಸ್ಸು,

ಎಂ. ಹುಣಸೆಕೆರೆ ಗ್ರಾಮ,
ಕಸಬಾ ಹೋಬಳಿ,
ಬೇಲೂರು ತಾಲ್ಲೂಕು,
ಹಾಸನ ಜಿಲ್ಲೆ. ..... ಪ್ರತಿವಾದಿಗಳು

(1 ಮತ್ತು 2 ನೇ ಪ್ರತಿವಾದಿಯರ ಪರವಾಗಿ ಶ್ರೀ ಮಂಜೇಗೌಡ, ವಕೀಲರು ಪ್ರತಿನಿಧಿಸಿರುತ್ತಾರೆ. 3 ರಿಂದ 5 ನೇ ಪ್ರತಿವಾದಿಯರ ಪರವಾಗಿ ಶ್ರೀ ದಿನಕರ್ ಕುಶಾವರ, ವಕೀಲರು ಪ್ರತಿನಿಧಿಸಿರುತ್ತಾರೆ.)

**: ಮಧ್ಯಂತರ ಅರ್ಜಿ-2 ಕ್ಕೆ ಪಕ್ಷಕಾರರು :**

ಶ್ರೀ ಶ್ರೀಮತಿ ಸಿ.ಆರ್. ವಿಶಾಲಾಕ್ಷಿ ಕೋಂ ಶಂಕರಾಚಾರ್
ಮತ್ತು ಇತರರು ....ಅರ್ಜಿದಾರರು/ವಾದಿಗಳು

ವಿರುದ್ಧ

ಶ್ರೀಮತಿ ಕಮಲ ಉಃ ಕಮಲಮ್ಮ ಕೋಂ ರಾಮಚಾರಿ
ಮತ್ತು ಇತರರು ..ಎದುರುದಾರರು/ಪ್ರತಿವಾದಿಗಳು

**ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿ ಮಧ್ಯಕಾಲೀನ ಅರ್ಜಿ ಸಂಃ 2 ರ ಮೇಲಿನ ಆದೇಶ**

ವಾದಿಯರು ಪ್ರತಿವಾದಿಯರ ವಿರುದ್ಧ ಮಧ್ಯಂತರ ಅರ್ಜಿ ಸಂ.2 ನ್ನು ಸಲ್ಲಿಸಿ, ದಾವೆ ತೀರ್ಮಾನವಾಗುವವರೆಗೆ 4 ನೇ ಪ್ರತಿವಾದಿಯು ದಾವಾ ಆಸ್ತಿಯಾದ ಹಾಸನ ಜಿಲ್ಲೆ, ಬೇಲೂರು ತಾಲ್ಲೂಕು, ಕಸಬಾ ಹೋಬಳಿ, ಎಂ. ಹುಣಸೇಕೆರೆ ಗ್ರಾಮದ 1)ಸರ್ವೆ ನಂಬರ್ಃ 53/1 ರಲ್ಲಿನ ವಿಸ್ತೀರ್ಣ 0-07 ಗುಂಟೆ, 2)ಸರ್ವೆ ನಂಬರ್ಃ 53/5 ರಲ್ಲಿನ ವಿಸ್ತೀರ್ಣ 0-13 ಗುಂಟೆ, 3)ಸರ್ವೆ ನಂಬರ್ಃ 53/8 ರಲ್ಲಿನ ವಿಸ್ತೀರ್ಣ 0-04 ಗುಂಟೆ, 4)ಸರ್ವೆ ನಂಬರ್ಃ 64/5 ರಲ್ಲಿನ ವಿಸ್ತೀರ್ಣ 0-24 ಗುಂಟೆ, 5)ಸರ್ವೆ ನಂಬರ್ಃ 66/9 ರಲ್ಲಿನ ವಿಸ್ತೀರ್ಣ 0-19 ಗುಂಟೆ, 6)ಸರ್ವೆ ನಂಬರ್ಃ 81/6 ರಲ್ಲಿನ ವಿಸ್ತೀರ್ಣ 0-18 ಗುಂಟೆ ಆಸ್ತಿಗಳನ್ನು ಮಾರಾಟ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶದ ಮೂಲಕ ಪ್ರತಿವಾದಿಯರನ್ನು ನಿರ್ಬಂಧಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

2. ವಾದಿಯರು / ಅರ್ಜಿದಾರರು ತಮ್ಮ ಮಧ್ಯಂತರ ಅರ್ಜಿ-2 ರೊಂದಿಗಿರುವ ಪ್ರಮಾಣ ಪತ್ರದಲ್ಲಿ ಹೇಳುವುದೇನೇಂದರೆ, ಕಾಳಚಾರ್ ರವರಿಗೆ 3 ಜನ ಮಕ್ಕಳಿದ್ದು, ಅವರಲ್ಲಿ 2 ನೇ ಮಗ ರಾಮಚಾರ್ ರವರಿಗೆ 1 ನೇ ವಾದಿಯ ಗಂಡ ಹಾಗೂ 2 ಮತ್ತು 3 ನೇ ವಾದಿಯರ ತಂದೆ ಶಂಕರಾಚಾರ್, 2 ನೇ ಕಮಲ ಅಂದರೆ 1 ನೇ ಪ್ರತಿವಾದಿ ಹಾಗೂ 3 ನೇ ಮೀನಾಕ್ಷಿ ಅಂದರೆ 2 ನೇ ಪ್ರತಿವಾದಿಯು ಮಕ್ಕಳಾಗಿರುತ್ತಾರೆ. ದಾವಾ ಅನುಸೂಚಿ ಸ್ವತ್ತುಗಳು ವಾದಿಯರ ಮತ್ತು 1 ಮತ್ತು 2 ನೇ ಪ್ರತಿವಾದಿಯರ ಪಿತ್ರಾರ್ಜಿತವಾದ ಆಸ್ತಿಗಳಾಗಿರುತ್ತದೆ. ಸದರಿ ಸ್ವತ್ತುಗಳು ಮೂಲತಃ ಕಾಳಚಾರ್ ರವರ ಸ್ವತ್ತುಗಳಾಗಿದ್ದು, ನಂತರ ಅವುಗಳು ವಿಭಾಗದ ಮೂಲಕ ರಾಮಚಾರ್ ರವರಿಗೆ ಬಂದಿರುತ್ತದೆ. ಅದರಂತೆ ಅವರ ಹೆಸರಿನಲ್ಲಿ ಎಂ.ಆರ್. ನಂ. 5/1991-92 ರಂತೆ ಖಾತೆ ಇದ್ದು, ವಾದಿಯರು ಮತ್ತು 1 ಮತ್ತು 2 ನೇ ಪ್ರತಿವಾದಿಯರಿಗೆ ಸದರಿ ಆಸ್ತಿಗಳಲ್ಲಿ ಸಮಾನ ಹಿಸ್ಸೆಯ ಹಕ್ಕು ಇರುತ್ತದೆ.

3. ಮುಂದುವರೆದು ವಾದಿಯರು /ಅರ್ಜಿದಾರರು ತಮ್ಮ ಮಧ್ಯಂತರ ಅರ್ಜಿ-2 ರೊಂದಿಗಿರುವ ಪ್ರಮಾಣ ಪತ್ರದಲ್ಲಿ ಮತ್ತು ವಾದ ಪತ್ರದಲ್ಲಿ ಹೇಳುವುದೇನೇಂದರೆ , ಸದರಿ ರಾಮಚಾರ್ ರವರಿಗೆ 2016 ನೇ ಸಾಲಿನಲ್ಲಿ ಸುಮಾರು 90 ವರ್ಷ ವಯಸ್ಸಾಗಿದ್ದು, ಆರೋಗ್ಯ ಸರಿ ಇಲ್ಲದೇ, ಇಂದ್ರಿಯಾಗಳು ಕೆಲಸ ಮಾಡುತ್ತಿರಲಿಲ್ಲ ಹಾಗೂ ವ್ಯವಹಾರದ ಬಗ್ಗೆ ಯಾವುದೂ ತಿಳಿಯುತ್ತಿರಲಿಲ್ಲ. ಹೀಗಿರುವಾಗ 1 ಮತ್ತು 2 ನೇ ಪ್ರತಿವಾದಿಯರು ತಮ್ಮ ತಂದೆಯನ್ನು ಸಾಕುವ ನೆಪದಲ್ಲಿ ಪಿತ್ರಾರ್ಜಿತವಾದ ದಾವಾ ಸ್ವತ್ತುಗಳು ಕಾನೂನಿನ ತೊಡಕು ಇದ್ದರೂ ಸಹ ನೊಂದಾವಣಾಧಿಕಾರಿಗಳು ಹಾಗೂ ಪ್ರತಿವಾದಿಗಳು ಷರೀಕ್ಕಾಗಿ ವೃದ್ಧಾಪ್ಯ ವೇತನವನ್ನು ಪಡೆಯುವ ನೆಪದಲ್ಲಿ ದಿನಾಂಕಃ 29-07-2016 ರಂದು ದಾನಪತ್ರವನ್ನು ನೊಂದಣಿ ಮಾಡಿಸಿಕೊಂಡಿರುತ್ತಾರೆ. ಸದರಿ ಸಂಗತಿ ವಾದಿಯರಿಗಾಗಲೀ ಅಥವಾ ರಾಮಚಾರ್ ರವರಿಗಾಗಲೀ ತಿಳಿದಿರುವುದಿಲ್ಲ. ವಾದಿಯರು ಹಾಗೂ 1 ಮತ್ತು 2 ನೇ ಪ್ರತಿವಾದಿಯರು ಆಚಾರ್ ಜಾತಿಯವರಾಗಿದ್ದು, 3 ರಿಂದ 5 ನೇ ಪ್ರತಿವಾದಿಯರು ಲಿಂಗಾಯುತ ಜಾತಿಯವರಾಗಿರುತ್ತಾರೆ. ಇದರಿಂದ 3 ರಿಂದ 5 ಮತ್ತು ವಾದಿಯರಿಗೆ ಯಾವುದೇ ಸಂಬಂಧ ಇರುವುದಿಲ್ಲ. ಆದರೂ ಸಹ ವಾದಿಯರಿಗೆ ಸೇರಿದ ಸ್ವತ್ತುಗಳನ್ನು ಮೋಸ ಮಾಡುವ ಉದ್ದೇಶದಿಂದ ದಿನಾಂಕಃ 21-02-2018 ರಂದು ವಿಭಾಗ ಪತ್ರದಂತೆ

ವಿಭಾಗ ಮಾಡಿಕೊಂಡಿರುತ್ತಾರೆ. ಆದರೆ 3 ರಿಂದ 5 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಗಳ ಮೇಲೆ ಯಾವುದೇ ಹಕ್ಕಾಗಲೀ, ಸ್ವಾಧೀನವಾಗಲೀ, ಹಿತಾಸಕ್ತಿಯಾಗಲೀ ಇರುವುದಿಲ್ಲ. ವಾದಿಯರು ತಮ್ಮ ಪಾಲಿನ ಹಿಸ್ಸೆಯನ್ನು ಪ್ರತಿವಾದಿಯರಲ್ಲಿ ಕೇಳಿದಾಗ ಅದನ್ನು ನಿರಾಕರಿಸಿರುತ್ತಾರೆ. ವಾದಿಯರಿಗೆ ಸದರಿ ದಾವಾ ಆಸ್ತಿಗಳು ಹೊರತುಪಡಿಸಿ ಜೀವನ ಮಾಡಲು ಬೇರೆ ಯಾವುದೇ ಆಸ್ತಿಗಳು ಇರುವುದಿಲ್ಲ. ಆದ್ದರಿಂದ ವಾದಿಯರು ಸದರಿ ಕ್ರಯಪತ್ರ ಮತ್ತು ವಿಭಾಗ ಪತ್ರವು ವಾದಿಯರ ದಾವಾ ಆಸ್ತಿಗಳಲ್ಲಿನ ಹಿಸ್ಸೆಯ ಹಕ್ಕನ್ನು ಬದ್ಧಪಡಿಸುವುದಿಲ್ಲ. ಆದ್ದರಿಂದ ವಾದಿಯು ಸದರಿ ದಾವಾವನ್ನು ವಿಭಾಗ ಕೋರಿ ಹಾಗೂ ಘೋಷಣಾತ್ಮಕ ಡಿಕ್ರಿ ಕೋರಿ ಸಲ್ಲಿಸಿದ್ದು, ಸದರಿ ದಾವಾ ಆಸ್ತಿಯಲ್ಲಿ ತಮ್ಮ ಪಾಲಿನ ಆಸ್ತಿಯ ಪ್ರತ್ಯೇಕ ಸ್ವಾಧೀನವನ್ನು ಪ್ರತಿವಾದಿಯರು ವಾದಿಗೆ ವಹಿಸಿಕೊಡುವಂತೆ ಆದೇಶ ಮಾಡಬೇಕಾಗಿ ಕೋರುತ್ತಾರೆ. ಸದರಿ ದಾವಾದೊಂದಿಗೆ ಮಧ್ಯಂತರ ಅರ್ಜಿ-2 ನ್ನು ಸಲ್ಲಿಸಿ, ದಾವಾ ತೀರ್ಮಾನವಾಗುವವರೆಗೂ 4 ನೇ ಪ್ರತಿವಾದಿಯು ದಾವಾ ಆಸ್ತಿಗಳನ್ನು ಬೇರೆಯವರಿಗೆ ಮಾರಾಟ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶದ ಮೂಲಕ ಪ್ರತಿವಾದಿಯರನ್ನು ನಿರ್ಬಂಧಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

4. ದಾವಾ ಸಲ್ಲಿಸಿದ ಬಳಿಕ ನ್ಯಾಯಾಲಯ ಹೊರಡಿಸಿದ ಸಮನ್ಸಗೆ ಪ್ರತಿಯಾಗಿ ಪ್ರತಿವಾದಿಯರು ತಮ್ಮ ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. ಅಂತೆಯೇ 1 ನೇ ಪ್ರತಿವಾದಿಯು ತಮ್ಮ ಪ್ರತ್ಯೇಕ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಸದರಿ ಲಿಖಿತ ಹೇಳಿಕೆಯನ್ನು 2 ನೇ ಪ್ರತಿವಾದಿಯು ತಮ್ಮ ಪರವಾಗಿ ಲಿಖಿತ ಹೇಳಿಕೆಯನ್ನಾಗಿ ಅಳವಡಿಸಿಕೊಂಡಿರುತ್ತಾರೆ. ಅದೇ ರೀತಿ 3 ರಿಂದ 5 ನೇ ಪ್ರತಿವಾದಿಯರು ಜಂಟಿಯಾಗಿ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರತಿವಾದಿಯರು ತಮ್ಮ ತಮ್ಮ ಲಿಖಿತ ಹೇಳಿಕೆಗಳನ್ನು ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ-2 ಕ್ಕೆ ಆಕ್ಷೇಪಣೆಯನ್ನಾಗಿ ಅಳವಡಿಸಿಕೊಂಡಿರುತ್ತಾರೆ. 1 ನೇ ಪ್ರತಿವಾದಿಯು ಸದರಿ ಲಿಖಿತ ಹೇಳಿಕೆಯಲ್ಲಿ ವಾದಿಯರು ಮತ್ತು 1 ಮತ್ತು 2 ನೇ ಪ್ರತಿವಾದಿಯರ ಸಂಬಂಧವನ್ನು ಒಪ್ಪಿಕೊಂಡಿರುತ್ತಾರೆ. ಅಂತೆಯೇ ಕಾಳಚಾರ್ ರವರು ತಮ್ಮ ಕುಟುಂಬದ ಮೂಲಪುರುಷರಾಗಿದ್ದು, ಅವರು ತಮ್ಮ ಮಕ್ಕಳಿಗೆ ಹಿಸ್ಸೆ

ಮಾಡಿಕೊಟ್ಟಿರುವುದಾಗಿ, ನಂತರ ಅವರ ಮಗ ರಾಮಚಾರ್ ರವರು ಸಹ ತಮ್ಮ ಪಾಲಿನ ಪಿತ್ರಾರ್ಜಿತ ಹಾಗೂ ಸ್ವಯಾರ್ಜಿತವಾದ ಸ್ವತ್ತುಗಳನ್ನು ವಾದಿಯರು ಮತ್ತು 1 ಮತ್ತು 2 ನೇ ಪ್ರತಿವಾದಿಯರಿಗೆ ಸರಿಸಮನಾಗಿ ವಿಭಾಗ ಮಾಡಿಕೊಟ್ಟಿದ್ದು, ಅದರಂತೆ ಪಕ್ಷಗಾರರು ಅನುಭವಿಸಿಕೊಂಡು ಬರುತ್ತಿರುವುದಾಗಿ ಹೇಳಿರುತ್ತಾರೆ. ಮುಂದುವರೆದು ಸದರಿ ರಾಮಚಾರ್ ರವರು ಆರೋಗ್ಯವಾಗಿದ್ದಾಗಲೇ 1 ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ ದಾನಪತ್ರ ಮಾಡಿಕೊಟ್ಟಿರುತ್ತಾರ. 4 ನೇ ಪ್ರತಿವಾದಿ ಯಾವುದಕ್ಕೂ ಸೇರಿರುವುದಿಲ್ಲ. ಸದರಿ ರಾಮಚಾರ್ ರವರು ಇರುವಾಗಲೇ ಅವರ ಮಗ ಶಂಕರಾಚಾರ್ ರವರು ಪೌತಿಯಾಗಿರುವುದರಿಂದ ಶಂಕರಾಚಾರ್ ರವರಿಗೆ ಸೇರಿದ ಆಸ್ತಿಗಳನ್ನು ದಾನಪತ್ರದ ಮೂಲಕ ಕೊಡುತ್ತೇನೆಂದು ಕರೆದಾಗ 1 ನೇ ವಾದಿಯು ತಿರಸ್ಕರಿಸಿದ್ದರಿಂದ ಶಂಕರಾಚಾರ್ ರವರಿಗೆ ಸೇರಿದ ಆಸ್ತಿಯನ್ನು ದಿನಾಂಕಃ 25-09-2008 ರಿಂದಲೇ ಮರಣ ಶಾಸನ ಪತ್ರದ ಮೂಲಕ ಸರ್ವೆ ನಂಬರ್ಃ 66/2 ಪಿ ರಲ್ಲಿ 1-04 ಎಕರೆ ಪೈಕಿ 0-22 ಗುಂಟೆ ಮತ್ತು ಸರ್ವೆ ನಂಬರ್ಃ 2/2 ಪಿ ರಲ್ಲಿ 0-08 ಗುಂಟೆ ಆಸ್ತಿಯನ್ನು ವಾದಿಯರ ಹೆಸರಿಗೆ ಬರೆದಿಟ್ಟಿರುತ್ತಾರೆ. ಸದರಿ ಆಸ್ತಿಗಳು ಈಗಲೂ ಸಹ ರಾಮಾಚಾರ್ ರವರ ಹೆಸರಿನಲ್ಲಿ ಇದ್ದು, ವಾದಿಯರೇ ಅನುಭವವಿಸಿಕೊಂಡು ಬರುತ್ತಿರುತ್ತಾರೆ. ಸದರಿ ಆಸ್ತಿಗಳನ್ನು ಈ ದಾವಾದಲ್ಲಿ ಸೇರಿಸಿರುವುದಿಲ್ಲ. ಆದ್ದರಿಂದ ದಾವಾ ದಾವಾವು ನಿಲ್ಲತಕ್ಕದ್ದಲ್ಲ ಎಂದು ಹೇಳಿರುತ್ತಾರೆ.

5. ಮುಂದುವರೆದು 1 ನೇ ಪ್ರತಿವಾದಿಯು ತಮ್ಮ ಲಿಖಿತ ಹೇಳಿಕೆಯಲ್ಲಿ ನಿಲುವನ್ನು ತೆಗೆದುಕೊಳ್ಳುವುದೇನೆಂದರೆ, 3 ರಿಂದ 5 ನೇ ಪ್ರತಿವಾದಿಯರು 1 ಮತ್ತು 2 ನೇ ಪ್ರತಿವಾದಿಯರನ್ನು ಷರೀಕ್ಕು ಮಾಡಿಕೊಂಡು ದಿನಾಂಕಃ 21-02-2018 ರಂದು ವಿಭಾಗ ಮಾಡಿಕೊಂಡಿರುವುದಾಗಿ ಹೇಳಿರುವುದನ್ನು ಗಮನಿಸಿದರೆ ವಾದಿಯರು ಸರಿಯಾಗಿ ದಾಖಲಾತಿಗಳನ್ನು ಪರಿಶೀಲಿಸದೇ ಹಾಗೂ ಸತ್ಯಾಂಶಗಳನ್ನು ತಿಳಿಯದೇ ಈ ದಾವಾ ತಂದಿರುತ್ತಾರೆ. 3 ರಿಂದ 5 ನೇ ಪ್ರತಿವಾದಿಯರು ತಮಗೆ ಸೇರಿದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ. ವಾದಿಯರು 1 ಮತ್ತು 2 ನೇ ಪ್ರತಿವಾದಿಯರನ್ನು ಹಿಸ್ಸೆ ಸಂಬಂಧ ಭೇಟಿ ಮಾಡಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಯರಿಗೆ ವಿಭಾಗ ಮಾಡಲು ವಾದಿಯರು ತಿರಸ್ಕರಿಸಿರುವುದರಿಂದ 1 ಮತ್ತು 2 ನೇ ಪ್ರತಿವಾದಿಗೆ ಸೇರಿಬೇಕಾದ

ಆಸ್ತಿಗಳನ್ನು ದಾನಪತ್ರದ ಮೂಲಕ ನೀಡಿರುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ರಾಮಚಾರಿಯ ಯೋಗಕ್ಷೇಮ ಹಾಗೂ ಉತ್ತರಾಧಿ ಕ್ರಿಯೆಗಳನ್ನು ಮಾಡಿರುತ್ತಾರೆ. ದಾವಾ ಸ್ವತ್ತುಗಳ ಪೈಕಿ 1 ರಿಂದ 5 ಆಸ್ತಿಗಳನ್ನು ಕಾಳಮ್ಮರವರಿಗೆ ಮಾರಾಟ ಮಾಡಿದ್ದು, ದಿನಾಂಕಃ 22-02-2017 ರಂದು ಕಾಳಮ್ಮ ಕೋಂ ಲೇಟ್ ರುದ್ರೇಗೌಡರವರಿಂದ ರಾಮಾಚಾರ್ ರವರ ಮಗಳಾದ ಕಮಲಮ್ಮ ವಾಪಸ್ಸು ಸರ್ವೆ ನಂಬರ್ಃ 53/1 ರಲ್ಲಿ 0-07 ಗುಂಟೆ, ಸರ್ವೆ ನಂಬರ್ಃ 53/5 ರಲ್ಲಿ 0-13 ಗುಂಟೆ ಹಾಗೂ ಸರ್ವೆ ನಂಬರ್ಃ 53/8 ರಲ್ಲಿ 0-04 ಗುಂಟೆ ಅಂದರೆ ದಾವಾ ಐಟಂ ನಂಬರ್ಃ 1 ರಿಂದ 3 ನೇ ಆಸ್ತಿಗಳು ವಾಪಸ್ಸು ಪಡೆದಿರುತ್ತಾರೆ. ದಾವಾ ಐಟಂ ನಂಬರ್ಃ 4 ಹಾಗೂ 5 ನೇ ಆಸ್ತಿಗಳನ್ನು 1 ನೇ ಪ್ರತಿವಾದಿಯು 3 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದು ಕಾನೂನುಬದ್ಧವಾಗಿರುತ್ತದೆ ಎಂದು ಹೇಳುತ್ತಾ, ವಾದಿಯರು ತಮ್ಮ ವಿರುದ್ಧ ತಂದಿರುವ ದಾವಾವನ್ನು ವಜಾ ಮಾಡಬೇಕಾಗಿ ಕೋರಿರುತ್ತಾರೆ.

6. ಇನ್ನು 3 ರಿಂದ 4 ನೇ ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ ಹೇಳುವುದೇನೆಂದರೆ, ವಾದಿಯರು ಮತ್ತು 1 ಮತ್ತು 2 ನೇ ಪ್ರತಿವಾದಿಯರ ಸಂಬಂಧವನ್ನು ಒಪ್ಪಿಕೊಂಡಿರುತ್ತಾರೆ. ಆದರೆ ದಾವಾ ಸ್ವತ್ತುಗಳು ವಾದಿಯರ ಪಿತ್ರಾರ್ಜಿತವಾದ ಸ್ವತ್ತುಗಳು ಆಗಿರುವುದಿಲ್ಲ. ಸದರಿ ಸ್ವತ್ತುಗಳು 3 ನೇ ಪ್ರತಿವಾದಿಯ ಸ್ವಯಾರ್ಜಿತವಾದ ಸ್ವತ್ತುಗಳಾಗಿದ್ದು, ದಿನಾಂಕಃ 22-02-2017 ರಂದು ಕ್ರಯಪತ್ರದ ಮೂಲಕ 1 ನೇ ಪ್ರತಿವಾದಿಯಿಂದ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಸ್ವತ್ತುಗಳು 1 ನೇ ಪ್ರತಿವಾದಿಗೂ ಕೂಡಾ ಕ್ರಯದಿಂದ ಬಂದ ಸ್ವತ್ತುಗಳಾಗಿರುತ್ತದೆ. ನಂತರ ಸದರಿ ಸ್ವತ್ತುಗಳು 3 ರಿಂದ 5 ನೇ ಪ್ರತಿವಾದಿಯರು ತಮ್ಮ ತಮ್ಮಲ್ಲಿ ವಿಭಾಗ ಮಾಡಿಕೊಂಡಿದ್ದು, ತಮ್ಮ ತಮ್ಮ ಪಾಲಿನ ಆಸ್ತಿಗಳನ್ನು ಅನುಭವಿಸಿಕೊಂಡು ಬರುತ್ತಿರುತ್ತಾರೆ. ಅಲ್ಲದೇ ವಾದಿಯರಿಗೆ ಮರಣ ಶಾಸನದ ಮೂಲಕ ನೀಡಿರುವ ಸ್ವತ್ತುಗಳಾದ ಸರ್ವೆ ನಂಬರ್ಃ 66/2 ಪಿ ಹಾಗೂ ಸರ್ವೆ ನಂಬರ್ಃ 2/2 ಪಿ ಸ್ವತ್ತುಗಳನ್ನು ಸದರಿ ದಾವಾದಲ್ಲಿ ಸೇರಿಸದೇ ಇರುವುದರಿಂದ ಸದರಿ ದಾವಾವು ನಿಲ್ಲತಕ್ಕದ್ದಲ್ಲವೆಂದು ಹೇಳುತ್ತಾ, ಈ ಎಲ್ಲಾ ಮೇಲ್ಕಂಡ ಅಂಶಗಳ ಆಧಾರದ ಮೇಲೆ ಸದರಿ ದಾವೆಯನ್ನು ಹಾಗೂ ಅದರೊಂದಿಗೆ ಸಲ್ಲಿಸಿರುವ ಮಧ್ಯಂತರ ಅರ್ಜಿ-2 ನ್ನು ವಜಾ ಮಾಡಬೇಕಾಗಿ ಕೋರಿರುತ್ತಾರೆ.

7. ವಾದಿಯರು ಸಲ್ಲಿಸಿರುವ ಅರ್ಜಿ ಹಾಗೂ ಪ್ರತಿವಾದಿಯರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಆಧರಿಸಿ ಅರ್ಜಿಯ ಇತ್ಯರ್ಥಕ್ಕಾಗಿ ಈ ಕೆಳಗಿನಂತೆ ಅಂಶಗಳನ್ನು ಈ ನ್ಯಾಯಾಲಯವು ರೂಪಿಸಿರುತ್ತದೆ.

1. ವಾದಿಯರು, 4 ನೇ ಪ್ರತಿವಾದಿಯು ದಾವಾ ಅನುಸೂಚಿ ಆಸ್ತಿಯನ್ನು ಅಕ್ರಮವಾಗಿ 3 ನೇ ವ್ಯಕ್ತಿಗಳಿಗೆ ಮಾರಾಟ ಮಾಡಲು ಮುಂದಾಗಿರುತ್ತಾರೆ ಎಂಬುವುದನ್ನು ಮೇಲ್ನೋಟಕ್ಕೆ ತೋರಿಸುತ್ತಾರೆಯೇ?

2. ವಾದಿಯರು ಅರ್ಜಿಯಲ್ಲಿ ಕೋರಿರುವಂತೆ ತಮ್ಮ ಪರವಾಗಿ ಅನುಕೂಲತೆಯ ಒಲವು ಇದೆ ಎಂಬುದನ್ನು ತೋರಿಸುತ್ತಾರೆಯೇ?

3. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಯರಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡದಿದ್ದರೆ ತುಂಬಲಾರದ ಹಾನಿ ಅಥವಾ ನಷ್ಟ ಉಂಟಾಗುವ ಸಂಭವವಿದೆ ಎಂಬುದನ್ನು ತೋರಿಸುತ್ತಾರೆಯೇ?

4. ಯಾವ ಆದೇಶ?

8. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು.

9. ವಾದಿಯರು / ಅರ್ಜಿದಾರರು ಸಲ್ಲಿರುವ ಅರ್ಜಿ, ಪ್ರತಿವಾದಿಯರ ಲಿಖಿತ ಹೇಳಿಕೆ ಹಾಗೂ ಲಭ್ಯವಿರುವ ದಾಖಲೆಗಳನ್ನು ಪರಿಗಣಿಸಿ ಈ ನ್ಯಾಯಾಲಯವು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತದೆ.

ಅಂಶ:1 ಸಕಾರಾತ್ಮಕವಾಗಿ

ಅಂಶ:2 ಸಕಾರಾತ್ಮಕವಾಗಿ

ಅಂಶ:3 ಸಕಾರಾತ್ಮಕವಾಗಿ

ಅಂಶ:4 ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ

## : ಕಾರಣಗಳು :

9. ಅಂಶಗಳುಃ 1 ರಿಂದ 3 : ಈ ಮೂರೂ ಅಂಶಗಳು ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಹಾಗೂ ವಿಷಯಗಳ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಅವುಗಳನ್ನು ಒಟ್ಟಿಗೆ ವಿಮರ್ಶೆಗೆ ತೆಗೆದುಕೊಳ್ಳಲಾಗಿದೆಃ-

10. ವಾದಿಯರು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ವಿಭಾಗ, ಪ್ರತ್ಯೇಕ ಸ್ವಾಧೀನ ಕೋರಿ ಹಾಗೂ ಘೋಷಣಾತ್ಮಕ ಡಿಕ್ರಿ ಕೋರಿ ಸಲ್ಲಿಸಿರುತ್ತಾರೆ. ಸದರಿ ದಾವಾದೊಂದಿಗೆ ಮಧ್ಯಂತರ ಅರ್ಜಿ ಸಂ-2 ನ್ನು ಸಲ್ಲಿಸಿ, ದಾವೆ ತೀರ್ಮಾನವಾಗುವವರೆಗೆ 4 ನೇ ಪ್ರತಿವಾದಿ ದಾವಾ ಆಸ್ತಿಗಳನ್ನು ಮಾರಾಟ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶದ ಮೂಲಕ 4 ನೇ ಪ್ರತಿವಾದಿಯನ್ನು ನಿರ್ಬಂಧಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

11. ವಾದಿಯು ಮಧ್ಯಂತರ ಅರ್ಜಿ-2, ಪ್ರತಿವಾದಿಯರ ಲಿಖಿತ ಹೇಳಿಕೆ ಹಾಗೂ ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಯಿತು. ಪ್ರಸ್ತುತ ದಾವಾ ಐಟಂ ನಂಬರ್ಃ 1 ರಿಂದ 3 ಹಾಗೂ 6 ನೇ ಆಸ್ತಿಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಹಾಗೂ ದಾವಾ ಐಟಂ ನಂಬರ್ಃ 4 ಮತ್ತು 5 ನೇ ಆಸ್ತಿಯು 4 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವುದು 2020-2021 ಸಾಲಿನ ಪಹಣಿ ಪತ್ರಿಕೆಯಿಂದ ಮೇಲ್ನೋಟಕ್ಕೆ ಕಂಡುಬರುತ್ತದೆ. ಅದೇ ರೀತಿ ಮ್ಯುಟೇಷನ್ ನಂಬರ್ಃ ಹೆಚ್1 ರವರ ಪ್ರಕಾರ ದಾವಾ ಆಸ್ತಿಗಳು 2016-17 ನೇ ಸಾಲಿನಲ್ಲಿ 1 ನೇ ಪ್ರತಿವಾದಿಯ ಹೆಸರಿಗೆ ಅವರ ತಂದೆಯು ಬರೆದುಕೊಟ್ಟ ದಿನಾಂಕಃ 29-07-2016 ರ ದಾನಪತ್ರದ ಮೂಲಕ ಬಂದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ನಂತರದಲ್ಲಿ 2017-18 ಸಾಲಿನಲ್ಲಿ ಎಂ.ಆರ್. ನಂಬರ್ಃ ಹೆಚ್6 ರ ಪ್ರಕಾರ ಸದರಿ ದಾವಾ ಆಸ್ತಿಗಳು 3 ನೇ ಪ್ರತಿವಾದಿಯಿಂದ ವಿಭಾಗದ ಮೂಲಕ 4 ಮತ್ತು 5 ನೇ ಪ್ರತಿವಾದಿಯ ಹೆಸರಿಗೆ ಬಂದಿರುವುದು ಸಹ ಮೇಲ್ನೋಟಕ್ಕೆ ಕಂಡುಬರುತ್ತದೆ. ಹೀಗಿರುವಾಗ ವಾದಿಯರು ಸದರಿ ದಾವಾ ಸ್ವತ್ತುಗಳು ತಮ್ಮ ಪಿತ್ರಾರ್ಜಿತವಾದ ಆಸ್ತಿಗಳು ಎಂದು ಹೇಳಿರುತ್ತಾರೆ. ಸದರಿ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಕೆಲವು ಹಳೇಯ ದಾಖಲೆಗಳಾದ ಮುಟೇಷನ್ ರಿಜಿಸ್ಟರ್ ಹಾಗೂ ಇಂಡಿಕ್ಸ್ ಆಫ್ ಲ್ಯಾಂಡ್ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

ಸದರಿ ದಾಖಲೆಗಳ ಪ್ರಕಾರ ದಾವಾ ಆಸ್ತಿಗಳು ಮೂಲತಃ ಕಾಳಚಾರ್ ರವರಿಗೆ ನಂತರದಲ್ಲಿ ರಾಮಾಚಾರ್ ರವರಿಗೆ ಸೇರಿರುವುದು ಮೇಲ್ನೋಟಕ್ಕೆ ಕಂಡಬರುತ್ತದೆ.

12. ಹೀಗಿರುವಾಗ 1 ಮತ್ತು 2 ನೇ ಪ್ರತಿವಾದಿಯರು ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ವಾದಿಯರು ಮತ್ತು 1 ಮತ್ತು 2 ನೇ ಪ್ರತಿವಾದಿಯರ ಸಂಬಂಧವನ್ನು ಒಪ್ಪಿಕೊಂಡಿರುತ್ತಾರೆ. ಅಲ್ಲದೇ ದಾವಾ ಆಸ್ತಿಗಳು ರಾಮಚಾರ್ ರವರ ಪಿತ್ರಾರ್ಜಿತ ಹಾಗೂ ಸ್ವಯಾರ್ಜಿತವಾದ ಸ್ವತ್ತುಗಳು ಆಗಿರುವುದನ್ನು ಒಪ್ಪಿಕೊಂಡಿರುತ್ತಾರೆ. ಆದರೆ ಸದರಿ ದಾವಾ ಸ್ವತ್ತುಗಳನ್ನು ವಾದಿಯರು ಹಾಗೂ 1 ಮತ್ತು 2 ನೇ ಪ್ರತಿವಾದಿಯರು ಸರಿಸಮಾನಾಗಿ ಹಿಸ್ಸೆ ಮಾಡಿಕೊಂಡಿರುವುದಾಗಿ ಹೇಳಿರುತ್ತಾರೆ. ಆದರೆ ಇದಕ್ಕೆ ಸಂಬಂಧಿಸಿದಂತೆ ವಾದಿಯರು ಹಾಗೂ 1 ಮತ್ತು 2 ನೇ ಪ್ರತಿವಾದಿಯರ ನಡುವೆ ಆದ ವಿಭಾಗದ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಇದರಿಂದ ಕೇವಲ ಲಿಖಿತ ಹೇಳಿಕೆಯಲ್ಲಿ ತೆಗೆದುಕೊಂಡಿರುವ ನಿಲುವಿನ ಆಧಾರದ ಮೇಲೆ ಸದರಿ ಹಿಸ್ಸೆ ಆಗಿದೆ ಎಂದು ಹೇಳಲು ಬರುವುದಿಲ್ಲ. ಅಲ್ಲದೇ 1 ಮತ್ತು 2 ನೇ ಪ್ರತಿವಾದಿಯರು ಮುಂದುವರೆದು ತಮ್ಮ ಲಿಖಿತ ಹೇಳಿಕೆಯಲ್ಲಿ ದಾವಾ ಆಸ್ತಿಗಳನ್ನು ರಾಮಾಚಾರ್ ರವರು ದಾನಪತ್ರದ ಮೂಲಕ 1 ನೇ ಪ್ರತಿವಾದಿಗೆ ನೀಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಅದರಂತೆ ವಾದಿಯು ಸದರಿ ದಾನಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಸದರಿ ದಾನಪತ್ರದಲ್ಲಿ ಸ್ವಯಾರ್ಜಿತವಾದ ಆಸ್ತಿ ಎಂದು ಬರೆದಿರುತ್ತದೆ. ಆದರೆ 1 ಮತ್ತು 2 ನೇ ಪ್ರತಿವಾದಿಯರು ಸದರಿ ದಾವಾ ಆಸ್ತಿಗಳು ಪಿತ್ರಾರ್ಜಿತವಾದ ಆಸ್ತಿಗಳಾಗಿದ್ದು, ಸದರಿ ಆಸ್ತಿಗಳನ್ನು ವಾದಿಯರ ಪತ್ನಿ ಹಾಗೂ ತಂದೆಯಾದ ಶಂಕರಾಚಾರ್ ರವರಿಗೂ ಸಹ ದಾನಪತ್ರದ ಮೂಲಕ ವಿಭಾಗ ಮಾಡಿಕೊಡುವುದನ್ನು 1 ನೇ ವಾದಿ ತಿರಸ್ಕಾರ ಮಾಡಿರುವುದಾಗಿ ಹೇಳಿರುತ್ತಾರೆ. ಹೀಗಿರುವಾಗ ಪಿತ್ರಾರ್ಜಿತವಾದ ಸ್ವತ್ತುಗಳು ದಾನಪತ್ರದ ಮೂಲಕ ವಿಭಾಗ ಮಾಡಿಕೊಡಲು ಹಕ್ಕು ಇರುವುದಿಲ್ಲ ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅಲ್ಲದೇ 1 ಮತ್ತು 2 ನೇ ಪ್ರತಿವಾದಿಯರು 3 ರಿಂದ 5 ನೇ ಪ್ರತಿವಾದಿಯರು ಅವರ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವುದಾಗಿ ಹೇಳಿರುತ್ತಾರೆ. ಆದರೆ ಸದರಿ ಸ್ವತ್ತುಗಳ ಪೈಕಿ ದಾವಾ ಸ್ವತ್ತುಗಳು ಸಹ ಇದ್ದು, ಅದನ್ನು 1 ನೇ ಪ್ರತಿವಾದಿಯು 3 ನೇ ಪ್ರತಿವಾದಿಗೆ ಮಾರಾಟ

ಮಾಡಿರುವುದಾಗಿ ಹೇಳಿರುತ್ತಾರೆ. ಆದರೆ ಈ ರೀತಿ ಮಾರಾಟ ಮಾಡಿದ ಬಗ್ಗೆ ಯಾವುದೇ ದಾಖಲೆಗಳು ಪ್ರತಿವಾದಿಯರ ಕಡೆಯಿಂದ ಇರುವುದಿಲ್ಲ. ಇದರಿಂದ ದಾವಾ ಆಸ್ತಿಗಳು ಪ್ರಸ್ತುತ 2017-18 ರ ಮ್ಯುಟೇಷನ್ ಪ್ರಕಾರ 3 ನೇ ಪ್ರತಿವಾದಿಯಿಂದ 4 ಮತ್ತು 5 ನೇ ಪ್ರತಿವಾದಿಯ ಹೆಸರಿಗೆ ಇದ್ದರೂ ಸಹ ಹಾಗೂ ಪ್ರಸ್ತುತ 2020-2021 ನೇ ಸಾಲಿನ ಪಹಣಿಗಳ ಪ್ರಕಾರ ದಾವಾ ಐಟಂ ನಂಃ 1 ರಿಂದ 3 ಹಾಗೂ 6 ನೇ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿಗೆ ಹಾಗೂ 4 ಮತ್ತು 5 ನೇ ಆಸ್ತಿಗಳು 4 ನೇ ಪ್ರತಿವಾದಿಯರ ಹಕ್ಕು ಮತ್ತು ಸ್ವಾಧೀನಕ್ಕೆ ಯಾವ ರೀತಿ ಬಂದವು ಎಂದು ಹೇಳಲು ದಾಖಲೆಗಳನ್ನು 3 ರಿಂದ 5 ನೇ ಪ್ರತಿವಾದಿಯರು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಸದರಿ ದಾವಾ ಆಸ್ತಿಗಳು ವಾದಿಯರ ಪಿತ್ರಾರ್ಜಿತವಾದ ಆಸ್ತಿಗಳು ಆಗಿದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಸಾಕ್ಷಿ ವಿಚಾರಣೆಯ ನಂತರವಷ್ಟೇ ತೀರ್ಮಾನಕ್ಕೆ ಬರಲು ಸಾಧ್ಯವಾಗಿರುತ್ತದೆ. ಆದ್ದರಿಂದ ಸದರಿ ದಾವಾ ಆಸ್ತಿಗಳ ವಿಲೇವಾರಿ ಸೂಕ್ತ ಮಾರ್ಗದಲ್ಲಿ ಆದ ಬಗ್ಗೆ ನ್ಯಾಯಾಲಯಕ್ಕೆ ಗೊಂದಲ ಮೂಡಿರುತ್ತದೆ. ಆದ್ದರಿಂದ ಸದರಿ ಗೊಂದಲದ ನಿವಾರಣೆಗಾಗಿ ಸಾಕ್ಷಿ ವಿಚಾರಣೆಯ ಅವಶ್ಯಕತೆ ಇರುತ್ತದೆ. ಆದ್ದರಿಂದ ಈ ಹಂತದಲ್ಲಿ ಯಾವುದೇ ತೀರ್ಮಾನಕ್ಕೆ ಬರಲು ಸಾಧ್ಯವಿರುವುದಿಲ್ಲ. ಆದ್ದರಿಂದ ಈ ಹಂತದಲ್ಲಿ ವಾದಿಯರ ಪರವಾಗಿ ಮೇಲ್ನೋಟಕ್ಕೆ ಅನುಕೂಲತೆಯ ಒಲವು ಇರುವುದು ಕಂಡುಬರುತ್ತದೆ. ಒಂದು ವೇಳೆ ಮಧ್ಯಂತರ ಅರ್ಜಿ-2 ನ್ನು ಪುರಸ್ಕರಿಸಿದರೆ ಪ್ರತಿವಾದಿಯರಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ. ಆದ್ದರಿಂದ ವಾದಿಯರು ಸಲ್ಲಿಸಿರುವ ಮಧ್ಯಂತರ ಅರ್ಜಿ-2 ಯನ್ನು ಪುರಸ್ಕರಿಸಲು ಅರ್ಹವಾಗಿರುತ್ತದೆ. ಈ ಎಲ್ಲಾ ಕಾರಣಗಳ ಆಧಾರದ ಮೇಲೆ ಮೇಲ್ಕಂಡ ಮೂರೂ ಅಂಶಗಳನ್ನು ನ್ಯಾಯಾಲಯವು ಸಕರಾತ್ಮಕವಾಗಿ ಉತ್ತರಿಸುತ್ತದೆ.

13. ಅಂಶಃ 4 :

ಈ ಮೇಲ್ಕಂಡ ಅಂಶಗಳಲ್ಲಿನ ಕಾರಣಗಳಿಂದ ಈ ನ್ಯಾಯಾಲಯವು ಈ ಕೆಳಕಂಡತೆ ಅಂತಿಮ ಆದೇಶವನ್ನು ಮಾಡಿರುತ್ತದೆ.

**ಃ ಆದೇಶ ಃ**

ವಾದಿಯರು, ಪ್ರತಿವಾದಿಯರ ವಿರುದ್ಧ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿ ಸಲ್ಲಿಸಿರುವ ಮಧ್ಯಂತರ ಅರ್ಜಿ-2 ನ್ನು ಪುರಸ್ಕರಿಸಲಾಗಿದೆ.

ಮುಂದುವರೆದು, ದಾವೆ ತೀರ್ಮಾನವಾಗುವವರೆಗೆ 4 ನೇ ಪ್ರತಿವಾದಿಯು ದಾವಾ ಆಸ್ತಿಗಳು ಇತರರಿಗೆ ಮಾರಾಟ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶದ ಮುಖಾಂತರ ನಿರ್ಬಂಧಿಸಿ ಆದೇಶಿಸಿದೆ.

ಖರ್ಚಿನ ಕುರಿತು ಯಾವುದೇ ಆದೇಶವಿರುವುದಿಲ್ಲ.

(ಮೇಲ್ಕಂಡ ಆದೇಶವನ್ನು ಶೀಘ್ರಲಿಪಿಗಾರಳಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ಕೊಟ್ಟು, ಬೆರಳಚ್ಚಿನ ನಂತರ ತಿದ್ದುಪಡಿಯನ್ನು ಮಾಡಿ, ದಿನಾಂಕಃ 25 ನೇ ಮೇ 2022 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.)

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಬೇಲೂರು.

ಪ್ರತ್ಯೇಕ ಪ್ರತಿಯ ಆದೇಶದ ಭಾಗವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ.

ಆದೇಶ

ವಾದಿಯರು, ಪ್ರತಿವಾದಿಯರ ವಿರುದ್ಧ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿ ಸಲ್ಲಿಸಿರುವ ಮಧ್ಯಂತರ ಅರ್ಜಿ-2 ನ್ನು ಪುರಸ್ಕರಿಸಲಾಗಿದೆ.

ಮುಂದುವರೆದು, ದಾವೆ ತೀರ್ಮಾನವಾಗುವವರೆಗೆ 4 ನೇ ಪ್ರತಿವಾದಿಯು ದಾವಾ ಆಸ್ತಿಗಳು ಇತರರಿಗೆ ಮಾರಾಟ ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶದ ಮುಖಾಂತರ ನಿರ್ಬಂಧಿಸಿ ಆದೇಶಿಸಿದೆ.

**ಖರ್ಚಿನ ಕುರಿತು ಯಾವುದೇ ಆದೇಶವಿರುವುದಿಲ್ಲ.**

**ವಿವಾದಾಂಶಗಳ ರಚನೆಗಾಗಿ 06-07-2022.**

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಬೇಲೂರು.